ನನಗಿರುವಂಥ ಗಾಯಗಳನ್ನೇ ಎಲ್ಲರೂ ಹೊತ್ತಿದ್ದಾರೆ, ಆದ್ದರಿಂದಲೇ ನನ್ನನ್ನು ಅರ್ಥಮಾಡಿಕೊಳ್ಳುತ್ತಾರೆ ಅನ್ನುವ ನಂಬಿಕೆಯೇ ನನಗೆ ವಿಶ್ವಾಸವನ್ನು ತಂದುಕೊಟ್ಟಿದೆ. ಒಬ್ಬರ ಹಾಗೇ ಇನ್ನೊಬ್ಬರೂ ಅನ್ನುವ ಭರವಸೆ ತುಂಬಿರುವ, ಬಾಲಿಶ ಅನ್ನಿಸುವಂಥ ನಿಶ್ಚಯವೇ ಎಲ್ಲ ನಿಜವಾದ ಸಾಹಿತ್ಯದ ಉಗಮ ಸ್ಥಾನ. ಲೇಖಕನು ಕೋಣೆಯೊಳಗೆ ವರ್ಷಗಟ್ಟಲೆ ಒಂಟಿಯಾಗಿರುವಾಗ ಅವನ ಆ ವರ್ತನೆಯೇ ಮಾನವತೆಯ ಅಖಂಡತೆಯನ್ನು, ಕೇಂದ್ರವಿರದ ವಿಶ್ವವನ್ನೂ ಸೂಚಿಸುತ್ತ ಇರುತ್ತದೆ.

ಆದರೆ ಜಗತ್ತಿಗೆ ಒಂದು ಕೇಂದ್ರವಿದೆ, ಅದು ನಮ್ಮಿಂದ ತೀರ ದೂರದಲ್ಲಿದೆ ಎಂಬ ಭಾವ ತೀವ್ರವಾಗಿತ್ತು ಅನ್ನುವುದು ನಮ್ಮಪ್ಪನ ನೋಟ್‌ಬುಕ್ಕುಗಳಿಂದಲೂ ಇಸ್ತಾಂಬುಲ್‌ನ ನಮ್ಮ ನಿರ್ವರ್ಣ ಬದುಕಿನಿಂದಲೂ ತಿಳಿಯುತ್ತದೆ. ಈ ಮೂಲಾಂಶವು ಚೆಕೋವ್‌ನ ಅರ್ಥದ ಗಾವಂಡಿತನವನ್ನು ಹೇಗೆ ಹುಟ್ಟಿಸುತಿತ್ತು, ಇದು ನನ್ನ ಅಥೆಂಟಿಸಿಟಿಯನ್ನು ಪ್ರಶ್ನಿಸಿಕೊಳ್ಳುವ ಹಾಗೆ ಮಾಡಿತು ಅನ್ನುವುದನ್ನು ನನ್ನ ಪುಸ್ತಕಗಳಲ್ಲಿ ವಿವರಿಸಿದ್ದೇನೆ. ಈ ಭೂಮಿಯ ಮೇಲೆ ಇರುವ ಬಹುತೇಕ ಜನರಲ್ಲಿ ಇವೇ ಭಾವನೆಗಳು ಇವೆ, ನನಗಿಂತ ಹೆಚ್ಚಿನ ಮಟ್ಟದಲ್ಲಿ ಕೊರತೆಯ ಭಾವ, ಅಭದ್ರತೆಯ ಭಾವ, ದೀನ ಭಾವಗಳನ್ನು ಅನುಭವಿಸುತ್ತಾರೆ ಅನ್ನುವುದು ನನಗೆ ಅನುಭವದಿಂದ ಅರ್ಥವಾಗಿದೆ. ಹೌದು. ಭೂಮಿ ಇಲ್ಲದಿರುವುದು, ಮನೆ ಇಲ್ಲದಿರುವುದು, ಹಸಿವು ಇವು ಇಂದಿಗೂ ಮನುಷ್ಯ ಕುಲವನ್ನು ಕಾಡುತ್ತಿರುವ ದೊಡ್ಡ ಸಮಸ್ಯೆಗಳು. ಆದರೆ ಇಂದು ಟೀವಿ ಮತ್ತು ದಿನಪತ್ರಿಕೆಗಳು ಈ ಮೂಲಭೂತ ಸಮಸ್ಯೆಗಳನ್ನು ಅತ್ಯಂತ ಶೀಘ್ರವಾಗಿ, ಸರಳವಾಗಿ ಹೇಳುತ್ತಿವೆ. ಇಂಥ ವೇಗ ಮತ್ತು ಸರಳತೆ ಸಾಹಿತ್ಯಕ್ಕೆ ಎಂದೂ ಸಾಧ್ಯವಿಲ್ಲ. ಮನುಷ್ಯರ ಮೂಲಭೂತ ಭಯಗಳ ಪರಿಶೀಲನೆ – ಇದು ಸಾಹಿತ್ಯವು ಮಾಡಬೇಕಾಗಿರುವ ಕೆಲಸ. ಹೊರಗಿನವರಾಗಿಯೇ ಉಳಿದೇವು ಎಂಬ ಭಯ, ನಾವು ಯಾತಕ್ಕೂ ಬಾರದವರು ಅನ್ನುವ ಭಯ, ಅವುಗಳ ಮೂಲಕ ಮೂಡುವ ನಾವು ಅಯೋಗ್ಯರು ಅನ್ನುವ ಭಾವ, ಸಾಮೂಹಿಕವಾದ ಅಪಮಾನ, ದಾಳಿ, ಬೈಗುಳ, ಗೊಣಗಾಟ, ನೋವು, ಕಲ್ಪಿತ ಅವಮಾನ, ರಾಷ್ಟ್ರೀಯ ಒಣ ಹೆಮ್ಮೆ, ಇವೆಲ್ಲ ಅವೇ ಭಯಗಳ ಮುಂದುವರೆದ ರೂಪಗಳು... ಇಂಥ ಭಾವಗಳು ನನಗೆದುರಾದಾಗ, ಅವನ್ನೆಲ್ಲ ವ್ಯಕ್ತಪಡಿಸುವ ಸಾಮಾನ್ಯವಾಗಿ ಉತ್ಪ್ರೇಕ್ಷೆಯದೇ ಆಗಿರುವ ಮಾತು ಕೇಳಿದಾಗ ಅವು ನನ್ನೊಳಗಿನ ಕತ್ತಲನ್ನು ಮುಟ್ಟಿಸಿ ತೋರುತ್ತವೆ. ಸಾಮಾನ್ಯವಾಗಿ ಪಾಶ್ಚಾತ್ಯ ಜಗತ್ತಿಗೆ ಸೇರಿರದ ಬಗೆಬಗೆಯ ಜನತೆ ಮತ್ತು ರಾಷ್ಟ್ರಗಳು ಇಂಥ ಭಯಕ್ಕೆ ಶರಣಾಗಿ ತಮಗೆ ಅಪಮಾನವಾಯಿತು ಎಂಬ ಸಂವೇದನೆಯ ಕಾರಣದಿಂದ ಮೂರ್ಖ ಕೆಲಸಗಳಲ್ಲಿ ತೊಡಗುವುದಕ್ಕೆ ಸಾಕ್ಷಿಯಾದಾಗ ಅವರೊಡನೆ ಗುರುತಿಸಿಕೊಳ್ಳುವುದು ನನಗೆ ತೀರ ಸುಲಭವಾಗುತ್ತದೆ. ಇದೇ ಬಗೆಯಲ್ಲಿ ಪಶ್ಚಿಮದ ಜಗತ್ತಿನೊಡನೆಯೂ ಸುಲಭವಾಗಿ ಗುರುತಿಸಿಕೊಳ್ಳುತ್ತೇನೆ. ವಿವಿಧ ರಾಷ್ಟ್ರಗಳು, ವಿವಿಧ ಜನತೆ ತಮ್ಮ ಸಂಪತ್ತಿನ ಅಹಂಕಾರದಲ್ಲಿ, ನಮಗೆಲ್ಲ ನವೋದಯವನ್ನು ತಂದುಕೊಟ್ಟವರೆಂಬ ಹೆಮ್ಮೆಯಲ್ಲಿ, ಜ್ಞಾನದ ಬೆಳಕು, ಆಧುನಿಕತೆಯ ಹರಿಕಾರರೆಂಬ ಹಮ್ಮಿನಲ್ಲಿ ಇಷ್ಟೇ ಮೂರ್ಖವಾದ ಸ್ವಸಂತೃಪ್ತಿಯಲ್ಲಿ ಮುಳುಗಿಬಿಡುತ್ತಾರೆ.

ಅಂದರೆ ನಮ್ಮಪ್ಪ ಒಬ್ಬರೇ ಅಲ್ಲ, ನಾವೆಲ್ಲರೂ ಒಂದು ಕೇಂದ್ರವಿರುವ ಜಗತ್ತು ಎಂಬ ವಿಚಾರಕ್ಕೆ ಬಹಳ ಪ್ರಾಮುಖ್ಯ ನೀಡುತ್ತೇವೆ. ಕೋಣೆಯಲ್ಲಿ ವರ್ಷಗಟ್ಟಲೆ ಒಬ್ಬರೇ ಕೂತು ಬರೆಯುವುದಕ್ಕೆ ಈ ನಂಬಿಕೆಗೆ ವಿರುದ್ಧವಾದ ನಂಬಿಕೆ ಇರಬೇಕು. ನಮ್ಮ ಬರವಣಿಗೆಯನ್ನು ಒಂದಲ್ಲ ಒಂದು ದಿನ ಓದುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ, ಪ್ರಪಂಚದ ಜನರೆಲ್ಲ ಒಬ್ಬರ ಹಾಗೇ ಇನ್ನೊಬ್ಬರೂ